ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/65/2014–15 ದಿನಾಂಕ: 26–05–2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀ.1)ಲಂಬಾಣಿ ಸಾವಿತ್ರಿಬಾಯಿ ಗಂಡ ಲೇಟ್ ಕೃಷ್ಣನಾಯ್ಕ**<br>**2)ಲಂಬಾಣಿ ಗಂಗಿಬಾಯಿ ಗಂಡ ಲೇಟ್ ಸುಭಾಸನಾಯ್ಕ**<br>**3)ಲಂಬಾಣಿ ವಾಲುನಾಯ್ಕ ತಂದೆ ಲೇಟ್ ರೇವ್ಯಾನಾಯ್ಕ**<br>**4)ಲಂಬಾಣಿ ಯಂಕಿಬಾಯಿ ಗಂಡ ಲೇಟ್ ಪಕ್ಕೀರನಾಯ್ಕ**<br>**ನಾಗತಿ ಬಸಾಪುರ** | **ದೇವೇಂದ್ರ ತಂದೆ ವಾಲುನಾಯ್ಕ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ನಾಗತಿ ಬಸಾಪುರ | 324/ಬಿ/2 | 1.65 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಲಂಬಾಣಿ ಸಾವಿತ್ರಿಬಾಯಿ ಗಂಡ ಲೇಟ್ ಕೃಷ್ಣನಾಯ್ಕ ಇವರು ದಿನಾಂಕ 21/11/2015 ರಂದು ವಂಶವೃಕ್ಷ ನೊಂದಾಯಿತವಲ್ಲದ ಪಾಲುವಿಭಾಗ ಪತ್ರ,ಅಫಿಡವಿಟ್ ಹೇಳಿಕೆ ಮತ್ತು ಮರಣ ಸಮರ್ಥನ ಪತ್ರದೊಂದಿಗೆ ಅರ್ಜಿ ಸಲ್ಲಿಸಿದ ಮೇರೆಗೆ ಎಂ ಆರ್ ಸಂಖ್ಯೆ ಹೆಚ್69/2014–15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀ ದೇವೇಂದ್ರ ತಂದೆ ವಾಲುನಾಯ್ಕ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಕಾರಣ ಕಂದಾಯ ನೀರೀಕ್ಷಕರು ಹಡಗಲಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 16/04/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.ದಿನಾಂಕ 16/07/2015 ರಂದು ವಿಚಾರಣೆ ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ.ಶ್ರೀಮತಿ ಲಂಬಾಣಿ ಸಾವಿತ್ರಿಬಾಯಿ ಇವರು ಪಾಲುವಿಭಾಗದ ಪ್ರಕಾರ ತಮ್ಮ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.ಆದರೆ ಸರಕಾರಿ ಆದೇಶ ಸಂಖ್ಯೆ ದಿನಾಂಕ ಮೇರೆಗೆ ನೊಂದಾಯಿತವಲ್ಲದ ಪಾಲುವಿಭಾಗದ ದಸ್ತಾವೇಜನ್ನು ಪರಿಗಣಿಸಿ ಹಕ್ಕು ಬದಲಾವಣೆ ಮಾಡಬಾರದೆಂಬ ನಿರ್ದೇಶನ ಇರುವ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಸರಕಾರಿ ಆದೇಶ ಸಂಖ್ಯೆ ಸಂಖ್ಯೆ ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶ ಸಂಖ್ಯೆ 2002(4) ಕೆ ಸಿ ಸಿ ಆರ್ 2285ರ ಪ್ರಕಾರ ಮೇರೆಗೆ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸುತ್ತಾ ವಾದಿ ಮತ್ತು ಪ್ರತಿವಾದಿಗಳ ವಿವಾದವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ನಾಗತಿ ಬಸಾಪುರ | 324/ಬಿ/2 | 1.65 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.